PlanetRead

Literacy for a Billion

Movie: Jwalamukhi
Year: 1985

Song: Nodi Nodi Nodi Ella Nodi
Lyricist: Chi Udayashankar

ಆಹಹಾ ಆಹಹಾ ಆಹಾಹಾ

ಆ ಸೂರ್ಯ ಚೆಲ್ಲುವನು ಬೆಳಕನು ಜಗಕೆ

ಕಾರ್ಮೋಡ ಸುರಿಸುವುದು ಮಳೆಯನು ಭುವಿಗೆ

ಈ ಭೂಮಿ ನೀಡುವುದು ಬೆಳೆಯನು ಜಗಕೆ

ನೆಮ್ಮದಿಯ ನೀಡಲು ಈ ಲೋಕಕೆ

ಇದನರಿತು ಬಾಳಿದರೆ ಭೂಮಿಯೇ ಸ್ವರ್ಗ

ಬರೀ ಸ್ವಾರ್ಥಿಗಳೆ ಬದುಕಿದರೆ ಲೋಕವೇ ನರಕ

ಲೋಕವೇ ನರಕ...

ನೋಡಿ ನೋಡಿ ನೋಡಿ ಎಲ್ಲ ನೋಡಿ

ಅಲ್ಲಿ ನೋಡಿ ಒಮ್ಮೆ ನೋಡಿ

ಮತ್ತಿನಿಂದ ಮುಚ್ಚಿಕೊಂಡ

ಕಣ್ಣನೊಮ್ಮೆ ಬಿಟ್ಟು ನೋಡಿ

ನೋಡಿ ನೋಡಿ ನೋಡಿ ಎಲ್ಲ ನೋಡಿ

ಅಲ್ಲಿ ನೋಡಿ ಒಮ್ಮೆ ನೋಡಿ

ನಿಮ್ಮ ಲೋಕದಿಂದ ಹೊರಗೆ

ಬಂದು ನೋಡಿರಿ

ನರಕದಲ್ಲಿ ನರಳುತಿರುವ

ಜನರ ಕಾಣಿರಿ

ನಿಮ್ಮ ಲೋಕದಿಂದ ಹೊರಗೆ

ಬಂದು ನೋಡಿರಿ

ನರಕದಲ್ಲಿ ನರಳುತಿರುವ

ಜನರ ಕಾಣಿರಿ

ವಿಸ್ಕಿ ಬ್ರಾಂದಿ ಹೆಂಡವನು

ನಾಳೆ ಕುಡಿಯಿರಿ

ಕುಡಿವ ನೀರಿಗಾಗಿ ಅಳುವ

ಜನರ ನೋಡಿರಿ

ನೋಡಿ ನೋಡಿ ನೋಡಿ ಎಲ್ಲ ನೋಡಿ

ಅಲ್ಲಿ ನೋಡಿ ಒಮ್ಮೆ ನೋಡಿ

ತಿಂದು ತಿಂದು ರೋಗದಿಂದ

ನರಳ ಬೇಡಿರಿ

ತುತ್ತು ಅನಕಾಗಿ ಅಲೆವ

ಜನರ ನೋಡಿರಿ

ತಿಂದು ತಿಂದು ರೋಗದಿಂದ

ನರಳ ಬೇಡಿರಿ

ತುತ್ತು ಅನಕಾಗಿ ಅಲೆವ

ಜನರ ನೋಡಿರಿ

ನಿಮ್ಮ ಹಾಗೆ ಅವರು ಎಂಬ

ಸತ್ಯ ಮರೆತಿರಿ

ಅವರ ರೋಷ ನಿಮ್ಮ ನಾಶ

ಮರೆಯ ಬೇಡಿರಿ

ಮರೆಯ ಬೇಡಿರಿ

ಮರೆಯ ಬೇಡಿರಿ

*Disclaimer: PlanetRead does not own these lyrics and is not using them for any commercial purpose. For over 20 years, PlanetRead has been subtitling Bollywood songs for mass literacy. These lyrics are being offered as part of PlanetRead's literacy development initiative.*

*PlanetRead is a tax-exempt, not-for-profit: 501(c) (3) in the United States and 80(G) in India.*